4. ಕುಮ್ಕಿ ಶಿಬಿರದ ಸಾಕಾನೆಗಳ ಸಹಾಯದಿಂದ ಕಾಡಿನಿಂದ ಹೊರ ಬಂದ ಕಾಡಾನೆಗಳನ್ನು ಕಾಡಿನೊಳಗೆ ಓಡಿಸುವ ಕಾರ್ಯಾಚರಣೆ ಮಾಡಲಾಗುವುದು.

5. ಅರಣ್ಯ ಪರದೇಶಗಳಲ್ಲಿ ವನ್ಯಮೃಗಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳು ತೆಗೆಯುವುದು. ಇದರಿಂದ ಖಾಸಗಿ ಪ್ರದೇಶಕ್ಕೆ ವನ್ಯಮೃಗಗಳು ನುಗ್ಗುವುದನ್ನು ತಪ್ಪಿಸಲಾಗಿರುತ್ತದೆ.

6. ಆದಾಗ್ಯೂ ರೈತರ ಜಮೀನುಗಳಿಗೆ ಹಾಗೂ ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾಗೂ ಮಾನವ ಸಾವಿಗೆ ಕಾರಣವಾಗಿರುವ ಪುಂಡ ಕಾಡಾನೆಗಳನ್ನು ಹಾಗೂ ವನ್ಯಮೃಗಗಳನ್ನು ಗುರುತಿಸಿ ಅವುಗಳನ್ನು ಹಿಡಿದು ಸ್ಥಳಾಂತರಿಸಲಾಗುತ್ತಿದೆ.

ಇದರ ಹೊರತಾಗಿಯೂ ರೈತರ ಜಮೀನುಗಳಲ್ಲಿ ಬೆಳೆ ನಾಶ ಉಂಟಾದಾಗ ಆಗಿರುವ ನಷ್ಟವನ್ನು ಪರಿಶೀಲಿಸಿ, ಅಂದಾಜು ಮಾಡಿ ದಯಾತ್ಮಕಧನವನ್ನು ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿ ಮಂಜೂರು ಮಾಡಿದಂತೆ ಹಣದ ರೂಪದಲ್ಲಿ ನೀಡಲಾಗುತ್ತಿದೆ.

ಕಿರು ಅರಣ್ಯ ಭೂಮಿ ಕಬಳಿಕೆ

755(773) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ತುರುಹಳ್ಳಿ ಕಿರು ಅರಣ್ಯದಲ್ಲಿ ಸರ್ವೆ ನಂ. 5 ರಲ್ಲಿ 42 ಎಕರೆ ಮತ್ತು 41ರಲ್ಲಿ 94 ಎಕರೆ, 42ರಲ್ಲಿ 159 ಎಕರೆ ಭೂಮಿಯನ್ನು ಕರ್ನಾಟಕ ಅರಣ್ಯ ಅಧಿನಿಯಮ 1963ರ ಕಲಂ 64ಎ ಉಲ್ಲಂಘಿಸಿ ಅರಣ್ಯ ಇಲಾಖೆಯಿಂದ ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಸುಪ್ರೀಂ ಕೋರ್ಟ್ ತೀರ್ಪು ಪ್ರಕಾರ ಅರಣ್ಯ ಎಂಬ ವ್ಯಾಜ್ಯ ಇರುವ ಜಮೀನನ್ನು ಅರಣ್ಯೇತರ ಚಟುವಟಿಕೆಗಳಿಗಾಗಿ ಉಪಯೋಗಿಸ ಬಾರದು ಎಂಬ ನಿಯಮಗಳನ್ನು ಉಲ್ಲಂಘಿಸಿದ ಅಧಿಕಾರಿಗಳು ಯಾರು ;

ಇ) 2000 ರಿಂದ ಈವರೆವಿಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷ್ಯದ ಬಗ್ಗೆ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು) ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಅರಣ್ಯ ಇಲಾಖೆಯು ಒದಗಿಸಿರುವ ಮಾಹಿತಿಯನುಸಾರ ಬೆಂಗಳೂರು ದಕ್ಷಿಣ ತಾಲ್ಲೂಕು, ತುರುಹಳ್ಳಿ ಕಿರು ಅರಣ್ಯದಲ್ಲಿ ಕರ್ನಾಟಕ ಅರಣ್ಯ ಅಧಿನಿಯಮ 1963ರ ಕಲಂ 64ಎ ಉಲ್ಲಂಘಿಸಿ ಒತ್ತಿವರಿಯಾಗಿರುವ ವಿವರಗಳನ್ನು ಈ ಕೆಳಕಂಡಂತಿದೆ.

ಕ್ರ. ಸಂ.	ಅರಣ್ಯ ಪ್ರದೇಶದ ವಿವರ	ಸ.ನಂ.	ಅಧಿಸೂಚನೆ ಪ್ರಕಾರ ಒಟ್ಟು ವಿಸ್ತೀರ್ಣ (ಎ/ಗು)	ಒತ್ತುವರಿ ವಿಸ್ತೀರ್ಣ (ಎ/ಗು)
1	ಉತ್ತರಹಳ್ಳಿ ಮನವರ್ತೆ ಕಾವಲ್	5	343.38	10.08
2	ತುರಹಳ್ಳಿ ಎಂ.ಎಫ್.	41	94.08	0.054
3	ತುರಹಳ್ಳಿ ಎಂ.ಎಫ್.	42	159.13	23.36

ಸ.ನಂ. 42ರಲ್ಲಿ ಶ್ರೀ ನಾರಾಯಣಸಿಂಗ್ ಎನ್ನುವವರಿಗೆ 10.07 ಎಕರೆ ಜಮೀನು ಮಂಜೂರಾಗಿರುವುದಾಗಿ ಹಾಗೂ ಮತ್ತಿಬ್ಬರಿಗೆ 21.14 ಎಕರೆ ಮಂಜೂರಾಗಿರುವುದಾಗಿ ಖಾತಾ ದಾಖಲಾಗಿದ್ದು. ಈ ಬಗ್ಗೆ ವಿಶೇಷ ಜಿಲ್ಲಾಧಿಕಾರಿಗಳ ದಿನಾಂಕ: 15.03.2007ರ ಆದೇಶದಂತೆ ಅಕ್ರಮ ಖಾತೆ ಎಂದು ನಮೂದನ್ನು ರದ್ದುಪಡಿಸಲಾಗಿರುತ್ತದೆ. ವಿಶೇಷ ಜಿಲ್ಲಾಧಿಕಾರಿಗಳ ಈ ಆದೇಶವನ್ನು ಪ್ರಶ್ನಿಸಿ ಶ್ರೀ ಕೆ.ಟಿ. ಗಿರಿಯಣ್ಣ ಇವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲಿಸಿದ್ದು, ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ : 12979/2007ಕ್ಕೆ ಸಂಬಂಧಿಸಿದಂತೆ ದಿನಾಂಕ: 15.10.2008 ರಂದು ನೀಡಿದ ಆದೇಶದಲ್ಲಿ ಪುನರ್ ವಿಚಾರಣೆಗೆ ವಿಶೇಷ ಜಿಲ್ಲಾಧಿಕಾರಿಗಳಿಗೆ ಹಿಂತಿರುಗಿಸಿರುತ್ತಾರೆ. ಅದರಂತೆ ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.

ಆ) ಸುಪ್ರೀಂ ಕೋರ್ಟ್ ತೀರ್ಪು ಪ್ರಕಾರ ಅರಣ್ಯ ಎಂಬ ವ್ಯಾಖ್ಯೆ ಇರುವ ಈ ಜಮೀನುಗಳನ್ನು ಅರಣ್ಯೇತರ ಚಟುವಟಿಕೆಗಳಿಗಾಗಿ ಯಾವುದೇ ಭೂಮಿಯನ್ನು ಉಪಯೋಗಿಸುವುದಕ್ಕೆ ಅನವು ಮಾಡಿಕೊಟ್ಟಿರುವುದಿಲ್ಲ ಹಾಗೂ ನಿಯಮ ಉಲ್ಲಂಘಿಸಿದ ಅಧಿಕಾರಿಗಳು ಯಾರು ಇರುವುದಿಲ್ಲ. ಇವು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳಾಗಿರುತ್ತವೆ.

ಇ) ಬೆಂಗಳೂರು ನಗರ ವಿಭಾಗದಲ್ಲಿ 2000 ರಿಂದ ಈವರೆಗೆ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷ್ಯದ ಬಗ್ಗೆ ಯಾವುದೇ ಪ್ರಕರಣಗಳು ಇರುವುದಿಲ್ಲ.

ಕೆರೆಯಲ್ಲಿ ಹೂಳು ತುಂಬಿರುವುದು

757(1111) ಶ್ರೀ ಕೆ.ಜಿ. ಕುಮಾರಸ್ವಾಮಿ (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ;

ಅ) ಶಿವಮೊಗ್ಗ ಜಿಲ್ಲೆಯ ಭದ್ರಾ ಜಲಾಶಯ, ತುಂಗಾ ಜಲಾಶಯ ಮತ್ತು ಗೌಡನ ಕೆರೆ, ಹಾಯ್‌ಹೊಳೆ ಮತ್ತು ಕಡ್ಲೆಒಡ್ಡುಗಳಲ್ಲಿ ಸಂಗ್ರಹವಾಗಿರುವ ಹೂಳಿನ ಪ್ರಮಾಣವೆಷ್ಟು ;

ಆ) ಕೃಷ್ಣಾ ಬೇಸಿನ್‌ನಲ್ಲಿರುವ ಈ ಜಲ ಸಂಗ್ರಹಣ ಕೇಂದ್ರಗಳಿಂದ ರಾಜ್ಯದ ಪಾಲಿನ ನೀರನ್ನು ಸಂಪೂರ್ಣ ಬಳಸಿಕೊಳ್ಳುವುದಕ್ಕಾಗಿ ಹೂಳು ತೆಗೆಯುವ ಅಥವಾ ಪರ್ಯಾಯ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ಇದಕ್ಕಾಗಿ ನಿಗದಿಪಡಿಸಿದ ಅನುದಾನವೆಷ್ಟು ;

ಇ) ಗೌಡನ ಕೆರೆಯು 116 ಎಕರೆ ವಿಸ್ತೀರ್ಣದ್ದು, ಇದರಲ್ಲಿನ ಹೂಳು ತೆಗೆಯಲು ಹಾಗೂ ದೋಣಿವಿಹಾರ ಕೇಂದ್ರ ಮಾಡಲು ಸಾರ್ವಜನಿಕರಿಂದ ಒತ್ತಾಯ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಭದ್ರಾ ಜಲಾಶಯದಲ್ಲಿ ಸಂಗ್ರಹವಾದ ಹೂಳಿನ ಪ್ರಮಾಣ 60.92 MCum ಆಗಿರುತ್ತದೆ.